(27) 2

Regd No B C. 155

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

11—2—1965

ಪ್ರಮುಖ ಜಿಲ್ಲೆ ವರ್ತಮಾನಗಳಿಗಾಗಿ
ಆಕರ್ಷಣೀಯ ಲೇಖನಗಳಿಗಾಗಿ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನಯಾ ಪೈ

Protect the Cow
ಗೋಸಂರಕ್ಷಣೆ ಮಾಡಿ

ಸಂಪಾದಕರು:- ಅರಮನೆ ಹಿರಿಸ್ಕೇದಾರ್ ಎಂ ಪಿ ಸುಬ್ಬಯ್ಯಂಕಾಯರು 2 ಪೈಸೆ

ಹಿಂದೀ ವಿರುದ್ಧ ಬಿಕರ ಪರಿಸ್ಥಿತಿ
ಸೈನಿಕರಿಂದ ಗೋಳೀಬಾರ್
23 ಮಂದಿಯ ಸಾವು

ಮಾ ತಾ ರ ತರಂಗ

ಹೊಸಪೇಟೆ— ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತೆಲಗು ಮತ್ತು ತಮಿಳು ಕಲಿಸಬೇಕೆಂದು ವಿಜಯನಗರ ಕಾಲೇಜು ವಿದ್ಯಾರ್ಥಿಗಳು ವಿದ್ಯಾಮಂತ್ರಿ ಶ್ರೀ ಕಂಪಿಯವರಿಗೆ ಮನವಿಪತ್ರ ಅರ್ಪಿಸಿದರು

★

ತಿನವೆಗ— ರಾಷ್ಟ್ರಕವಿಗಳಾದ ಕುವೆಂಪುರವರು ವಿಶ್ವಕವಿ ಆಗಲು ಅರ್ಹರಾಗಿದ್ದಾರೆಂದು ಪ್ರೊ ॥ಡಿ ಆರ್ ಬೇಂದ್ರೆ ಹೇಳಿದರು.

★

ನವದೆಹಲಿ— ಈ ಸಂಜೆ ಭಾಷಾ ಪ್ರಶ್ನೆ ಕುರಿತು ಪ್ರಧಾನಿ ಶಾಸ್ತ್ರಿಗಳು ಆಕಾಶವಾಣಿ ಭಾಷಣ ಮಾಡುವರು

★

ನವದೆಹಲಿ— ಕೈರ್ತಾ ಕೊಲೆ ಸಂಬಂಧದಲ್ಲಿ ದಿವಾಕರ್ ಮತ್ತು ಶೋಭಾರಾಣಿಗಳನ್ನು ಹೊಂದಿದ್ದ ಒಬ್ಬನು ದಸ್ತಗಿರಿ ಮಾಡಲ್ಪಟ್ಟನು

★

ಶಿವಮೊಗ್ಗಾ ಜಿಲ್ಲೆಯಲ್ಲಿ ಖಡ್ಡಾಯ ವಿದ್ಯಾಧ್ಯಾಪನವು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರಲಾಗಿದೆ.

★

ತೆ ತಾಂಪೇಪುಂ ಜಿಲ್ಲೆಯ ಪೊವ್ಮಿಗೆ ಮತ್ತು ಕಟ್ಟೇಪುಂ ಗಾವಗಳಲ್ಲಿ ವಾಸವಿರೋಧೆ ತಂಡದವರು ಧಾಳಿ ನಡೆಸಿ ಅಕ್ರಮವಾಗಿ ತಯಾರಿಕೆಯನ್ನು ತಡೆದು ಪೊಲೀಸ್ ಹಜ್ಜಾಮಂಗಿಯನ್ನು ದಸ್ತಗಿರಿ ಮಾಡಿದರು.

ಮದರಾಸು— ರಾಜ್ಯದಲ್ಲಿ ನಿನ್ನೆ ಹಿಂದೀ ವಿರೋಧ ಪ್ರದರ್ಶನವು ಭೀಕರ ಗೊಂಡು ಪೋಲೀಸರಿಂದ ಹಠೋಟಿಗೆ ತರಲು ಸಾಧ್ಯವಾಗದಿರಲು, ಸೈನ್ಯ ಕರೆಸಲಾಯಿತು— ತಿರುಚಂಗೋಡು, ತಿರುಪೂರು, ಕೊಯಮತ್ತೂರುಗಳಲ್ಲಿ ಗುಂಡಿನೇಟಿನಿಂದ 23 ಜನ ಸತ್ತರು — ತಿರುಪೂರಿನಲ್ಲಿ ಇಬ್ಬರು ಪೋಲೀಸು ಸಬ್ ಇನಸ್ಪೆಕ್ಟರುಗಳನ್ನು ಗುಂಪಿನವರು ಕಲ್ಲು ಸಾಹುಸಿದರೆಂದೂ, ಕೊಯಮತ್ತೂರಿನಲ್ಲಿ ರೈಲ್ವೇ ಸ್ಟೇಷನ್ನಿಗೆ ಬೆಂಕಿ ಇಟ್ಟರೆಂದೂ ಚೀಫ್ ಸೆಕ್ರೆಟರಿಯವರು ಹೇಳಿದ್ದಾರೆ— ಕರೈಕಲ್, ತಿರುಸಲ್ವಾರು ಮತ್ತು ತಿರುವಲಂಗಾಯನ ಪಟ್ಟಣಗಳಲ್ಲಿ ಎಲ್ಲಾ ಕಾರುಗಳು ಬಸ್ಸುಗಳನ್ನು ವಿದ್ಯಾರ್ಥಿಗಳು ನಿಲ್ಲಿಸಿ ಅವುಗಳ ಮೇಲೆ ಹಿಂದಿ ವಿರುದ್ಧ ಭಿತ್ತಿ ಪತ್ರ ಅಂಟಿಸಿದರು — ಕೊಯಂ ರೈಲ್ವೇ ಸ್ಟೇಷನ್, ಪೋಸ್ಟಾಫೀಸು, ತಾಲ್ಲೂಕು ಆಫೀಸು, ಸಬ್ ಮ್ಯಾಜಿಸ್ಟ್ರೇಟು ಕೋರ್ಟು ಸುಡಲ್ಪಟ್ಟವು ಮತ್ತು ಲೂಟಿ ಮಾಡಲ್ಪಟ್ಟವು — ಈರೋಡು-ತಿರುಚಿ ವ್ಯಾಳ್ಯೆ ರೈಲು ಓಡಾಟ ನಿಂತಿದೆ — ತಿರುಪತಿಯಲ್ಲಿ ವಿದ್ಯಾರ್ಥಿ ಗುಂಪು ಪದುರಿಸಲು ಅಶ್ರುವಾಯು ಪ್ರಯೋಗಿಸಲಾಯಿತು — ಹಿಂದೀ ವಿರೋಧಿಗಳಿಂದ ಮುತ್ತಲ್ಪಟ್ಟಿದ್ದ ಮನಪುರಿ ರೈಲ್ವೇ ಸ್ಟೇಷನ್ನಲ್ಲಿ ಪೋಲೀಸರು ಗೋಳೀಬಾರಿಂದ ಒಬ್ಬ ಸತ್ತನು — ಜಳವಳ ನಿಲ್ಲಿಸಲು ಡಿವಿಕೆ ನಾಯು ಅಣ್ಣಾಧುರೈ, ಸ್ವತಂತ್ರ ಪಕ್ಷದ ರಾಜಾಜಿ ಮುಂತಾದವರು ಮನವಿ ಮಾಡಿದ್ದಾರೆ — ಶಂಕರಾಂಕ್ಯೂ ಈ ಬಗ್ಗೆ ತಿಳುವಳಿಕೆಯಾಗಿದೆಯೆಂದೂ ಅವರು ಹೇಳಿರುವರು.

★

ನಾಳೆ ಹರತಾಳಕ್ಕೆ ಕರೆ

ಮದರಾಸು— ಹಿಂದೀ ವಿರೋಧ ವಿದ್ಯಾರ್ಥಿ ಜಳವಳ ಸಮಿತಿ ನಾಳೆ ಶಕ್ತ ವಿರೋಧಗಳನ್ನು ಏರ್ಪಡಿಸಿದೆ— ಮತ್ತು ರಾಜ್ಯವ್ಯಾಪಕ ಹರತಾಳಕ್ಕೆ ಕರೆಕೊಟ್ಟಿದೆ

★

ಬೆಕ್ಕಿನ ಸೇವೆ

ಬೆಂಗಳೂರು— ಪೈಸ್ಕೂಲು ವಿದ್ಯಾರ್ಥಿಗಳ ಕಲ್ಲು ಹೊಡೆತದಿಂದ ಇಬ್ಬರು ಪೋಲೀಸರು ಗಾಯಗೊಂಡರು — ಕಸ್ಟೋಡಿಯಲ್ ವಿಂಟಿನಲ್ಲಿ ಅನೇಕ ಕಡೆ ಪೋಲೀಸರು ಬಿಕ್ಕಿನ ಸೇವೆ ನಡೆಸಿದರು.

★

ಪ್ರತಿಬಂಧ

ಜೊಗಳೂರು— ಒಂದು ವಾರ ಸಭೆ ಮಂಟಪಗಳಿಗೆ ನೊದಲಾದ್ದು ಪತಿಬಂಧಿಸಲಾಗಿದೆ.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ
12 ಶುಕ್ರವಾರ ಏಕಾದಶಿ ಆರ್ದ್ರಾ

ವೈಸೂಂಗೆ ದ್ವಿದಳಧಾನ್ಯ

ವೈಸೂಂಗೆ ಪಂಚಾಯಿತಿ ಸುಕಾಲಂವು ಕೂಡಲೇ 1150 ಕ್ವಿಂಟಾಲು ದ್ವಿದಳಧಾನ್ಯ ಮತ್ತು ಜೇಳೆಯನ್ನು ಸಂಪೋಷಿಸು ಮಾಡಲು ಒಪ್ಪಿದೆ

★

ನೀಲಗಿರಿಯಲ್ಲಿ 144 ನೇ ಸೆಕ್ಷನ್

ಊಟಕಮಂಡ್— 5000 ವಿದ್ಯಾರ್ಥಿಗಳು ಭಿತ್ತಿಪತ್ರ ಮತ್ತು ಕಲ್ಲು ಬಾವುಟ ಹಿಡಿದುಕೊಂಡು ಹಿಂದೀ ಪ್ರತಿಭಟನ ಮನುಷ್ಯ ಎತ್ತಿನಗಾಡಿಯಲ್ಲಿ ಹೊತೆಗೊಂಡು ಮೆರವಣಿಗೆ ನಡೆಸಿದರು — ನೀಲಗಿರಿಯ ಕಲೆಕ್ಟರು 144 ನೇ ಸೆಕ್ಷನ್ ಹೊರಡಿಸಿದ್ದಾರೆ

★

ನೇತಾಜಿಯವರ ಪ್ರತಿಮೆ

ಕಲ್ಕತ್ತಾ— ನೇತಾಜಿ ಸುಭಾಷ ಚಂದ್ರ ಬೋಸರ ಪ್ರತಿಮೆಯನ್ನು ಇವರು ಹಿಂದೆ ಡಿರ್ಬೆತನಲ್ಲಿದ್ದ ಅಲೀಪುರ ಕೇಂದ್ರ ಜೈಲಿನ ಕೋಣೆಯಲ್ಲಿ ಇಡಲು ಪಶ್ಚಿಮ ಬಂಗಾಳ ಮಂತ್ರಿಮಂಡಲವು ನಿರ್ಧರಿಸಿದೆ

ನೀಲೀ ಗುಲಾಬಿ, ಹಳದಿ ಟೊಮೇಟೋ !

.... ಆಧುನಿಕ ವಿಶ್ವಾಮಿತ್ರರ ಮಹತ್ಸಾಧನೆ ....

ಅಣುಶಕ್ತಿ ಎಂಬ ಪದವನ್ನು ಗಂಟಿಕ್ಕಿಕೊಡನೆ ಉತ್ಪಾತಕ ಮಾರಣಾಸ್ತ್ರವಾದ ಅಣುಗುಂಡಿನ ನೆನಪು ಮನಃಪಟಲದ ಮುಂದೆ ಬಂದು ನಿಲ್ಲುತ್ತದೆ : ಆದರೆ ಅಣುಶಕ್ತಿಯನ್ನು ಜನತೆಗೆ ತಿಳಿಯದ ವಿಷಯ ವಾಗಿದೆ : ಅಣುಶಕ್ತಿಯನ್ನು ಸಾಧಕ ಕಾರ್ಯಗಳಿಗೆ ಯಾವ ರೀತಿಯಲ್ಲಿ ಬಳಸಿಕೊಳ್ಳಬಹುದೆಂದು ಒಗ್ಗೆ ಚೀನ ಎಲ್ಲಾ ದೇಶಗಳೂ ಪ್ರಯೋಗಗಳನ್ನು ನಡೆಸುತ್ತಲೇ ಇವೆ : ಒಂದು ಜಲವನಕ ವಾಂಬಿನ ಶಕ್ತಿಯಾಗಿ ಉಪಯೋಗಿಸಿಕೊಳ್ಳುವ ಅಣುಶಕ್ತಿಯನ್ನು ಸಾಧಕ ಕಾರ್ಯಗಳಿಗೆ ಬಳಸಿಕೊಂಡಿದ್ದೇ ಆದರೆ, ಇಡೀ ಜಗತ್ತಿನಲ್ಲಿ ಯಾವುದೇ ಶಕ್ತಿಯನ್ನೇ ಮಾಡದೆ ಕುಳಿತು ತಿನ್ನಬಹುದೆಂದು ವಿಜ್ಞಾನಿಗಳು ತಿಳಿಸಿದ್ದಾರೆ ; ವಿಶ್ವದ ಪ್ರಜಾಕೋಟಿಯು ಮಾಡುವ ಕೆಲಸಗಳೆಲ್ಲವನ್ನೂ ಆ ಶಕ್ತಿಯೇ ಮಾಡಿ ಮುಗಿಸುವುದು ; ಅದಾಲ್ಟಂಡಿನಲ್ಲಿರುವ ವೇಗವರ್ಧಕಗಳಂದಲ್ಲಿರುವ ಪಂಕೋನಾಗಾರವು ಅಣುಶಕ್ತಿಯನ್ನು ವ್ಯವಸಾಯಕ್ಕೆ ಹೇಗೆಹೇಗೆ ಬಳಸಿಕೊಳ್ಳಬಹುದೆಂಬುದರ ಬಗ್ಗೆ ಪರೀಕ್ಷೆಗಳನ್ನು ನಡೆಸುತ್ತಿದೆ.

1963 ರಲ್ಲಿ ಇಲ್ಲಿ ಒಂದು ಅಣು ರಿಯಾಕ್ಟರನ್ನು ಸ್ಥಾಪಿಸಲಾಯಿತು : ಇದರ ಸಹಾಯ ದಿಂದ ಅಣುಶಕ್ತಿಯನ್ನು ವ್ಯವಸಾಯದಲ್ಲಿ ಹೇಗೆ ಉಪಯೋಗಿಸಿ ಕೊಳ್ಳಬಹುದೆಂಬುದರ ಬಗ್ಗೆ ಸಂಶೋಧನೆ ನಡೆಸಲಾಯಿತು. ಈ ಶಕ್ತಿಯ ಸಹಾಯದಿಂದ ಆಹಾರ ಪದಾರ್ಥಗಳು ಕೆಡದಂತೆ ದೀರ್ಘಕಾಲ ಕಾಪಾಡಿಡುವುದು ಹೇಗೆ ಎಂಬುದನ್ನೂ ಪರೀಕ್ಷಿಸಲಾಗುತ್ತಿದೆ.

ವಿಶ್ವದ ಯಾವ ಮೂಲೆಯಲ್ಲಾದರೂ ಎದ್ದು ಕಾಣುವ ಅಂಶವೆಂದರೆ, ಅಂಹೊಟ್ಟೆ ಜನತೆ. ಎದ್ದು ಕೇಳುವ ಕೂಗೆಂದರೆ ಅನ್ನದ ಹಾಹಾಕಾರ! ಒಂದು ದೇಶದ ಜನರು ಅನ್ನಕ್ಕಾಗಿ ಅರ್ತನಾದ ಮಾಡುತ್ತಿದ್ದಾರೆಂದರೆ, ಬೆಳೆಸಿದ್ದನ್ನು ಸಂಪೂರ್ಣವಾಗಿ ಕಾಪಾಡುವ ವ್ಯವಸ್ಥೆ ಮಾಡಿರಲಿಲ್ಲವೆಂಬುದೇ ಸರಿಯಾದ ಕಾರಣ : ಬೆಳೆ ಕೈಗೆ ಬರುವ ಮುನ್ನ ಹಕ್ಕಿಗಳು ಕೋತಿಗಳು ನಾಶಮಾಡುತ್ತಿದ್ದರೆ ಬೆಳೆ ಕೈಗೆ ಬಂದು ಸಂಗ್ರಹವಾದ ಮೇಲೆ ಇಲಿ ಹೆಗ್ಗಣ ಮುಂತಾದುವುಗಳ ಧಾಳಿ ಅಂಧವಾಗುತ್ತದೆ : ತೇವವಾದ ಪ್ರದೇಶದಲ್ಲಿ ಟ್ಟರೂ ಅಪಾರ ಧಾನ್ಯಗಳು ನಾಶವಾಗುವುದುಂಟು ; ಅಹಾರ ವಸ್ತುಗಳನ್ನು ಸಮರ್ಪಕವಾದ ರೀತಿಯಲ್ಲಿ ಕಾಪಾಡಿದರೆ ಅನ್ನದ ಹಾಹಾಕಾರ ತನ್ನಷ್ಟಕ್ಕೆ ತಾನೇ ಅಡಗಿಹೋಗುವುದೆಂದು ದೇಗರ ಇಂಗರ್ ಸಂಸ್ಥೆ ತಿಳಿಸುತ್ತದೆ.

ಈ ವಿಷಯದಲ್ಲಿ ಅಣುಶಕ್ತಿಯನ್ನು ಬಳಸಿಕೊಳ್ಳುವುದರಿಂದ ಮೂಡೆಗಟ್ಟಲೆ ಧಾನ್ಯವನ್ನು ಸಂರಕ್ಷಿಸಿಟ್ಟು, ಅಹಾರವನ್ನು ಕಬಳಿಸಲು ಬರುವ ಇಲಿ ಹೆಗ್ಗಣ ಹುಳು ಮುಂತಾದುವು ನಿರ್ನಾಮವಾಗುತ್ತದೆ : ಅಹಾರ ಪದಾರ್ಥಗಳಿಗೆ ಯಾವ ರೀತಿಯು ಕೆಡಕೂ ಇಲ್ಲ : ಧಾನ್ಯಗಳನ್ನು ಮಾತ್ರವಲ್ಲದೆ ಹಣ್ಣುಗಳು ತರಕಾರಿ ಗಳನ್ನೂ ಬಹಳ ಕಾಲ ಕೆಡದಂತೆ ನೋಡಿಕೊಳ್ಳಬಹುದು.

ಅಣುಶಕ್ತಿಯ ಸಹಾಯದಿಂದ ವ್ಯವಸಾಯದಲ್ಲಿ ಬಲು ಸುಧಾರಣೆಗಳಾಗಿರುತ್ತವೆ. ಫಲವೂ ಬಲು ಹೆಚ್ಚು ; ಹಣ್ಣು ಹೂವುಗಳ ಬಣ್ಣಗಳನ್ನೇ ಬದಲಾಯಿಸಿ ಒಹುದೆಂಬುದನ್ನು ತೋರಿಸಿ ಜಗತ್ತನ್ನೇ ಆಶ್ಚರ್ಯದಲ್ಲಿ ಮುಳುಗಿಸಿದ್ದಾರೆ.

ಈ ವಿಜ್ಞಾನಿಗಳ ಸಾಹಸದ ಫಲವಾಗಿ ನೀಲಿವರ್ಣದ ಗುಲಾಬಿಗಳನ್ನೂ ಹಳದೀಬಣ್ಣದ ಪೊಮ್ಯಾಟೋಹಣ್ಣುಗಳನ್ನೂ ಕಾಣುತ್ತಿದ್ದಾರೆ : ಈ ಅಧುನಿಕ ವಿಶ್ವವಿಶ್ವರ ಮಾಡಶಾಸ್ತ್ರಜ್ಞನನ್ನು ಕಂಡು ವೀಕ್ಷಕರು ಬೆಂಗಾಗಿದ್ದಾರೆ !

ವುಡ್‌ಲಾಂಡ್ 5-2-65 ರಿಂದ
ಶಿ ಸು ಅಮೋಘ ಆರಂಭ
— ಅಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —
ಹರ್ಕ್ಯೂಲೆಸ್ HERCULES
ವಿ
ನಟವರ್ಗ — ದಾರಾಸಿಂಗ್, ಶಿಶಿ, ಹೆಲೆನ್, ಮುಮ್ತಾಜ್, ಮ್ಯಾಟ್ಸ್‌ರೂಮಾತಿ
ಸಾಹಸಮಯ ರೋಮಾಂಚಕ ಅದ್ಭುತ ಚಿತ್ರ : ನೃತ್ಯ ಸಂಗೀತ ವೈಭೋದಯ
[ದಿನವಹಿ 3 ಪ್ರದರ್ಶನಗಳು]

ಆಪೆರಾ— 12-2-65 ರಿಂದ
ಮನಮೋಹಕ ತಮಿಳು ಚಿತ್ರ [ದಿನವಹಿ ಆಟಗಳು.]
ಆ ಮ್ಮಾ ಎಂಗೆ ?
ನಟವರ್ಗ— ಮುತ್ತುರಾಮನ್, ಜಯಶ್ರೀ, ಚಂದ್ರಕಾಂತ, ವಿ.ನ್ಗೋರ್
ಬೇಬಿ ಶಕೀಲ

ರಣಜಿತ್‌ನಲ್ಲಿ 5-2-65 ರಿಂದ
ಅಮೋಘ ಆರಂಭ
.... ಪ್ರತಿ ಸೂಕ್ಷ್ಮಾಂಶವೂ ನೋಡಿ ಆನಂದಿಸಬೇಕಾದ ಅತ್ಯದ್ಭುತ ಕನ್ನಡ ಚಿತ್ರ ....
— ಕರ್ನಾಟಕ ಫಿಲಂಸ್ ಅವಿಸ್ಮರಣೀಯ, ವಿವಿಧ ಭಾರತಿಯವರ —
ಬೆರತ ಜೀವ [ಕನ್ನಡ]
ತಾರಾಗಣ— ಕಲ್ಯಾಣ ಕುಮಾರ್, ಅಶ್ವಥ್, ಕಾಮಣ್ಣಂದ್ರಕಾಸ್ತ್ರಿ
ನರಸಿಂಹರಾಜು, ಶಿವರಾಜ್, ಸರೋಜಾದೇವಿ, ಲಕ್ಷ್ಮೀದೇವಿ, ಜಯಶ್ರೀ
ನಿರ್ಮಾಪಕರು— ಕು. ರಾ. ಸೀತಾರಾಮು ಶಾಸ್ತ್ರಿ
4 ವಾರಗಳು ಕಾಂಪ್ಲಿಮೆಂಟರಿ ಪಾಸು, ಫ್ರೀ ಪಾಸುಗಳನ್ನು ಮನ್ನಾ ಮಾಡಿರುತ್ತೆ.
ಪ್ರತಿ ದಿನ 3 ಪ್ರದರ್ಶನಗಳು — ಕರ್ನಾಟಕ ಫಿಲಂಸ್ ಹಂಚಿಕೆ

ಅಶೋಕಾ ಏಜೆನ್ಸೀಸ್
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಸಮಸ್ತ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಬಗೆಯ ರೋಗಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

SHAKTI
SUDHA
Superb Tonic

Help The 'Gorakshana'
"ಗೋರಕ್ಷಣಾ" ಕ್ಕೆ ಬೆಂಬಲಿಗರಾಗಿರಿ
ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಿದೆ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಪಾಲನೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.
ವಾರ್ಷಿಕ ಚಂದಾ 50 ಪೈಸೆ "ಗೋರಕ್ಷಣ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು
ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪೇಟೆ, ಮೈಸೂರು 4

Lakshminarasimha Press
Quality Printing — Neat Binding
Sivarampet, Mysore

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M. S. Krishna Rao
at the Satyavadi Press, Chamarajapuram, Mysore 4